ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ

**ಸಿ.ಸಿ. ಸಂಖ್ಯೆ-829/2017**

ಪಿರ್ಯಾದಿದಾರರು : ವಿಶ್ವನಾಥಪುರ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : ಎ1. ರಾಮಪ್ಪ ಮತ್ತು ಮತ್ತೊಬ್ಬರು

ದೋಷಾರೋಪಣೆ

ಶ್ರೀ. ಕೆಂಚನಗೌಡ ಪಾಟೀಲ, ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ ಆದ ನಾನು ಆರೋಪಿಗಳಾದ

1. ರಾಮಪ್ಪ ಬಿನ್ ಮುನಿಯಪ್ಪ,
2. ಅನಿಲ್ ಬಿನ್ ರಾಮಪ್ಪ,
3. ಆಂಜಿನಪ್ಪ ಬಿನ್ ಲೇಟ್ ಕೆಂಪಣ್ಣ,
4. ಹನುಮಂತೇಗೌಡ ಬಿನ್ ಆಂಜಿನಪ್ಪ

ವಾಸಃ ಮಾಯಸಂದ್ರ,
ದೇವನಹಳ್ಳಿ ತಾಲ್ಲೂಕು.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ. 05-04-2016 ರಂದು ಬೆಳಿಗಿನ ಜಾವ 03.00 ಗಂಟೆಗೆ ವಿಶ್ವನಾಥಪುರ ಪೋಲೀಸ್ ಠಾಣಾ ಸರಹದ್ದಿನ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಎನ್. ಹೆಚ್. 207 ರಸ್ತೆಯಿಂದ ಚಿಕ್ಕ ಓಬದೇನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ 1 ರಿಂದ 4 ನೇ ಆರೋಪಿಗಳಾದ ನೀವುಗಳು, ಆ ಪೈಕಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಟ್ರಾಕ್ಟರ್ ನೊಂದಣಿ ಸಂಖ್ಯೆ ಕೆಎ-40-ಟಿ -5706 ಮತ್ತು ಟ್ರೈಲರ್ ನಂ. ಕೆಎ -40 -ಟಿ -5707 ಚಾಲಕರಾಗಿದ್ದು, ಆ ಪೈಕಿ 3 ಮತ್ತು 4 ನೇ ಆರೋಪಿಗಳಾದ ನೀವುಗಳು ಟ್ರಾಕ್ಟರ್ ನೊಂದಣಿ ಸಂಖ್ಯೆ ಕೆಎ-43-ಟಿ -1100 ಮತ್ತು ಟ್ರೈಲರ್ ನಂ. ಕೆಎ -43 -ಟಿ -1101 ರ ಚಾಲಕರಾಗಿದ್ದು, ಅಕ್ರಮವಾಗಿ ಯಾವುದೇ ಪರವಾನಗಿಯನ್ನು ಪಡೆಯದೇ ಗ್ರಾವಲ್ ಮರಳನ್ನು ಕಳ್ಳತನ ಮಾಡಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂ.379 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಿಸಿದೆ.

ಆದುದರಿಂದ ಆರೋಪಿತರಾದ ನಿಮ್ಮ ವಿರುದ್ಧ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕಂದು ನಿರ್ದೇಶಿದ್ದೇನೆ.

ಪ್ರಶ್ನೇ-1: ಆರೋಪಿಯಾದ ನೀವು ಮೇಲೆ ಹೇಳಿದ ದೋಷಾರೋಪಣೆಯನ್ನು ಕೇಳಿದ್ದಿರಾ?

ಉತ್ತರ: ಎ 1.

ಎ 2.

ಎ 3.

ಎ 4.

ಪ್ರಶ್ನೇ-2 ಆರೋಪಿಯಾದ ನೀವು ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರಾ?

ಉತ್ತರಃ ಎ 1.

ಎ 2.

ಎ 3.

ಎ 4.

ಈ ಮೇಲೆ ಹೇಳಿದ ದೋಪಾರೋಪಣೆಯನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲು ಮಾಡಿಕೊಂಡಿರುತ್ತೇನೆ.

**2023 ನೇ ಇಸವಿ, ಫೆಬ್ರವರಿ 24 ನೇ ತಾರೀಖು**

**(ಶ್ರೀ. ಕೆಂಚನಗೌಡ ಪಾಟೀಲ)**
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ದೇವನಹಳ್ಳಿ